ಆ ಪ್ರದೇಶದ ಸುತ್ತಮುತ್ತಲೂ ಅಂತರ್ಜಲ ವೃದ್ಧಿಯಾಗಿ ಊರಿನಲ್ಲಿರುವ ಎಲ್ಲಾ ಮನೆಗಳು ಕುಸಿದು ಹೋಗುತ್ತಿವೆ. ಇದರಿಂದಾಗಿ ಅಲ್ಲಿನ ಗ್ರಾಮಸ್ಥರು ಬದುಕುವುದಕ್ಕೆ ಕಷ್ಟವಾಗಿದ್ದು ಇಡೀ ಹಳ್ಳಿಯನ್ನೇ ಸ್ಥಳಾಂತರಿಸುವ ಬಗ್ಗೆ ಜಿಲ್ಲಾಧಿಕಾರಿಯಿರಬಹುದು, ನೀರಾವರಿ ಇಲಾಖೆಯ ಸಂಬಂಧಪಟ್ಟ ಅಧಿಕಾರಿಗಳು ಯಾರೂ ಕೂಡ ಅದರ ಬಗ್ಗೆ ಕಾಳಜಿವಹಿಸಲಿಲ್ಲ. ಈ ವಿಷಯವನ್ನು ನಾನು ಪ್ರಾಸ್ತಾವಿಕವಾಗಿ ಪ್ರಸ್ತಾಪಿಸುತ್ತಿದ್ದೇನೆ. ಏಕೆಂದರೆ, ಉಪಾಧ್ಯಕ್ಷರ ಮನವೊಲಿಸಿ ಹೆಚ್ಚು ಕಾಲಾವಕಾಶ ತೆಗೆದುಕೊಳ್ಳಬೇಕೆಂಬ ದೃಷ್ಟಿಯಿಂದ ಇಂತಹ ಸಮಸ್ಯೆಗಳೇ ಜಾಸ್ತಿ ಇರುವುದರಿಂದ ಇದರ ಬಗ್ಗೆ ಹೆಚ್ಚಿನ ಗಮನ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಸಂಪನ್ಮೂಲವನ್ನು ಕ್ರೋಢೀಕರಿಸುವುದರ ಬಗ್ಗೆ ಹೇಳುವುದಾದರೆ, ಸಂಪನ್ಮೂಲವನ್ನು ಯಾವ ರೀತಿ ಕ್ರೋಢೀಕರಿಸಬೇಕು? ಡಿಸೆಂಬರ್, 1996ರ ಅಂತ್ಯಕ್ಕೆ ವಿಶ್ವಬ್ಯಾಂಕಿನಿಂದ ಈಗಾಗಲೇ ಬರುತ್ತಿರುವ ಎಲ್ಲಾ ಹಣಕಾಸಿನ ಸಹಾಯಗಳು ನಿಂತುಹೋಗುತ್ತದೆ. ಮುಂದೆ ಪರಿಸ್ಥಿತಿ ಏನು? ನೀವು ನಿಮ್ಮ ಆಯವ್ಯಯದಲ್ಲಿ ನಿಗದಿಪಡಿಸುವ ಹಣದ ಪ್ರಮಾಣ ಬಹಳ ಕಡಿಮೆಯಾಗಿದ್ದು 200-300 ಕೋಟಿ ರೂಪಾಯಿಗಳನ್ನು ಕೊಡುತ್ತೀರಿ. ಈ ಹಣವನ್ನು ಬಿಡುಗಡೆ ಮಾಡುವುದಿಲ್ಲ. ನೀವು ಕೃಷ್ಣಾ ಭಾಗ್ಯ ಜಲ ನಿಗಮದ ಕಡೆ ಕೈ ತೋರಿಸುತ್ತಿದ್ದೀರಿ. ಸದರಿ ನಿಗಮವನ್ನು ಪ್ರಾರಂಭಿಸಿದ ರೀತಿಯ ವೇಗದಲ್ಲೇ ಹಣವನ್ನು ಸಂಗ್ರಹಿಸಲಿಲ್ಲ.

ಇದರ ಬಗ್ಗೆ ಪ್ರಧಾನ ಮಂತ್ರಿಗಳಾಗಿರುವವರು ಹೇಳಿರುವ ಉತ್ತರವನ್ನು ನಾವು ವಿರೋಧಿಸಿದ್ದೇವೆ. ಸೆಬಿ ಯಿಂದ ಅನುಮತಿ ಪಡೆದುಕೊಳ್ಳುವುದು ನಮಗೆ ಗೊತ್ತಿರಲಿಲ್ಲ, ಈಗ ಅನುಮತಿ ಪಡೆದುಕೊಂಡಿದ್ದೇವೆ ಎಂದು ಹೇಳಿರುವುದು ಉತ್ತರವಲ್ಲ. ದಯಮಾಡಿ ಹೆಚ್ಚು ಹಣವನ್ನು ಕ್ರೊಢೀಕರಿಸಿ ನಮ್ಮ ಪಾಲಿನ ನೀರಿನ ಮೇಲಿರುವ ಹಕ್ಕನ್ನು ಉಳಿಸಿಕೊಳ್ಳಲು ಪ್ರಯತ್ನ ಪಡಬೇಕು. ಇದರ ಜೊತೆಗೆ ಇವೊತ್ತು ರೈತರು ಕೂಡ ಜವಾಬ್ದಾರರಾಗಬೇಕಾಗುತ್ತದೆ. ಇವೊತ್ತು ಯಾವುದೇ ಭಾಗದ ಅಚ್ಚುಕಟ್ಟು ಪ್ರದೇಶದಲ್ಲಿ ಕಟ್ಟಕಡೆಯ ಭಾಗದಲ್ಲಿರುವ ರೈತರ ಜಮೀನುಗಳಿಗೆ ಸಂಪೂರ್ಣವಾಗಿ ನೀರಾವರಿ ಸೌಲಭ್ಯ ಒದಗಿಸಿಕೊಟ್ಟಿರುವುದರಿಂದ ಅವರ ಮೇಲೂ ಕರ ಭಾರ ಹಾಕಬೇಕಾಗುತ್ತದೆ ಮತ್ತು ಆ ಮೂಲಕ ಸಂಪನ್ಮೂಲ ಕ್ರೋಢೀಕರಿಸಿಕೊಳ್ಳಬೇಕು, ಇಲ್ಲದಿದ್ದರೆ ಸಂಪನ್ಮೂಲ ಬರಲು ಸಾಧ್ಯವಿಲ್ಲ. ಸುಮಾರು 30 ಲಕ್ಷದಿಂದ 50 ಲಕ್ಷ ಎಕರೆಗಳವರೆಗೆ ನೀರಾವರಿ ಸೌಲಭ್ಯ ಒದಗಿಸಿಕೊಡುವಂಥ ಈ ಯೋಜನೆಯಿಂದ ಏಕಕಾಲಕ್ಕೆ ಎಲ್ಲಾ ರೈತರಿಗೂ ಪ್ರಯೋಜನವಾಗುವಂಥ ಸಂದರ್ಭವಿರುವುದರಿಂದ ಆ ರೈತರುಗಳ ಮೇಲೆ ಕರಭಾರ ಹಾಕುವುದು ಸೂಕ್ತವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇಲ್ಲದಿದ್ದರೆ, ಯಾವ ರೀತಿಯಿಂದಲೂ ಸಂಪನ್ಮೂಲ ಕ್ರೋಢೀಕರಿಸುವುದಕ್ಕಾಗುವುದಿಲ್ಲ. ಇನ್ನು ಕೃಷ್ಣಾ ಜಲಾನಯನ ಪ್ರದೇಶದಲ್ಲಿ ಹಮ್ಮಿಕೊಳ್ಳಲಾಗಿರುವ ಕಾರ್ಯಕ್ರಮಗಳನ್ನು ಚುರುಕುಗೊಳಿಸಲು ನಾನು ಒಂದು ಸಲಹೆ ಕೊಡುತ್ತೇನೆ. ಏನೆಂದರೆ, ಒಂದು ಉನ್ನತ ಮಟ್ಟದ ಸಮಿತಿಯ ರಚನೆ ಅಥವಾ ಒಂದು ಸಮಿತಿ ಮಾಡುವುದು ಸೂಕ್ತವೆಂದು ಹಿಂದಿನ ಸರ್ಕಾರದಲ್ಲಿಯೇ ಅದರ ಬಗ್ಗೆ ಪ್ರಸ್ತಾಪವಾಗಿ ಕಾರ್ಯಕ್ರಮವನ್ನು ಸಹ ಹಾಕಿಕೊಳ್ಳಲಾಗಿತ್ತು.

7 ಪ್ರಕಟಣೆ

MR. DEPUTY SPEAKER : I welcome his excellency Mr. Derren Perrett Gribble the Australian High Commissioner to India, who is witnessing the proceedings of the House from the Officers' gallery.